**2017-2018**

# ಸರ್ಕಾರಿ ಪ್ರೌಢಶಾಲೆ ಜಿ.ಕೆ.ಹಳ್ಳಿ ಚನ್ನಗಿರಿ ತಾಲ್ಲೂಕು

**9ನೇ ತರಗತಿ ಸಮಾಜವಿಜ್ಞಾನ ಸಂಕಲನಾತ್ಮಕ ಮೌಲ್ಯಮಾಪನ–1 ಪ್ರಶ್ನೆ ಪತ್ರಿಕೆ ಒಟ್ಟು ಅಂಕಗಳು:90**

I. ಸೂಕ್ತ ಉತ್ತರಗಳನ್ನು ಆಯ್ದು ಬರೆಯಿರಿ **12 * 1 = 12**

**1.** ಏಸು ಕ್ರಿಸ್ತರು ಹುಟ್ಟಿದ ಸ್ಥಳ ಯಾವುದು?

ಎ)ಜೆರೂಸಲಂ ಬಿ)ಮೆಕ್ಕಾ ಸಿ)ಮದೀನಾ ಡಿ)ಗೋಲ್ಗೋಥ

**2.** ಇಂಡೋ–ಇಸ್ಲಾಮಿಕ್ ಶೈಲಿಗೆ ಉದಾಹರಣೆ

ಎ)ಕುತುಬ್ ಮಿನಾರ್ ಬಿ)ಪಂಚಮಹಲ್ ಸಿ)ಅಕ್ಬರಿ ಮಹಲ್ ಡಿ)ಇಬಾದತ್–ಖಾನಾ

**3.** ದ್ವೈತ ಸಿದ್ಧಾಂತದ ಪ್ರತಿಪಾದಕರು ಯಾರು?

ಎ)ಶಂಕರಾಚಾರ್ಯರು ಬಿ)ರಾಮಾನುಜಾಚಾರ್ಯರು ಸಿ)ಮಧ್ವಾಚಾರ್ಯರು ಡಿ)ಬಸವೇಶ್ವರರು

**4.** ಮೊಘಲ್ ಸಾಮ್ರಾಜ್ಯದ ಸ್ಥಾಪನೆಗೆ ಕಾರಣವಾದ ಯುದ್ಧ

ಎ)ಕಣ್ವ ಬಿ)ಗೋಗ್ರ ಸಿ)ತರೈನ್ ಡಿ)ಪಾಣಿಪತ್

**5.** ಕೇಂದ್ರ ಶಾಸಕಾಂಗ ಎಂದು ಇದನ್ನು ಕರೆಯುತ್ತಾರೆ

ಎ)ರಾಜ್ಯಸಭೆ ಬಿ)ಸಂಸತ್ತು ಸಿ)ಲೋಕಸಭೆ ಡಿ)ವಿಧಾನಸಭೆ

**6.** ಕರ್ನಾಟಕ ವಿಧಾನಸಭೆಯ ಸದಸ್ಯರ ಸಂಖ್ಯೆ

ಎ)**545** ಬಿ)**282** ಸಿ)**225** ಡಿ)**250**

**7.** ತಾಯಿಯೇ ಕುಟುಂಬದ ಒಡತಿಯಾಗಿರುವುದು

ಎ)ಕೇಂದ್ರ ಕುಟುಂಬ ಬಿ)ಮಾತೃ ಪ್ರಧಾನ ಕುಟುಂಬ ಸಿ)ಪಿತೃ ಪ್ರಧಾನ ಕುಟುಂಬ ಡಿ)ವಿಸ್ತೃತ ಕುಟುಂಬ

**8.** ಕರ್ನಾಟಕ ಎಂದು ನಾಮಕರಣ ಮಾಡಿದ ವರ್ಷ

ಎ)**1973** ಬಿ)**1953** ಸಿ)**1964** ಡಿ)**1975**

**9.** ಕಪ್ಪು ಮಣ್ಣಿನಲ್ಲಿ ಬೆಳೆಯುವ ಬೆಳೆಗೆ ಉತ್ತಮ ಉದಾಹರಣೆ

ಎ)ಭತ್ತ ಬಿ)ರಬ್ಬರ್ ಸಿ)ಕಾಫಿ ಡಿ)ಹತ್ತಿ

**10.** ಇದನ್ನು ಹೈನುಬೆಳೆ ಎನ್ನವರು

ಎ)ರಾಗಿ ಬಿ)ಭತ್ತ ಸಿ)ಗೋಧಿ ಡಿ)ಜೋಳ

11. ನವೀಕರಣಗೊಳ್ಳುವ ಸಂಪನ್ಮೂಲ : ಗಾಳಿ :: ಮುಗಿದು ಹೋಗುವ ಸಂಪನ್ಮೂಲ :

ಎ)ನೀರು ಬಿ)ಚಿನ್ನ ಸಿ)ಭೂಮಿ ಡಿ)ಸೂರ್ಯನ ಶಾಖ

12. ನಿರ್ವಹಣೆಯ ತತ್ವಗಳನ್ನು ಸೂಚಿಸಿದವರು

ಎ)ಹೆನ್ರಿ ಫಯೋಲ್ ಬಿ)ಜೆ.ಎಲ್.ಹೇನ್ಸ್ ಸಿ)ಜಾರ್ಜ್.ಆರ್.ಟೆರ್ರಿ ಡಿ)ರಾಸ್ ಟೇಲರ್

II. ಒಂದು ವಾಕ್ಯದಲ್ಲಿ ಉತ್ತರಿಸಿ 16 * 1 = 16

13. ಹಿಜಿರಾ ಎಂದರೇನು?

14. ಚಂದ್ ಬರದಾಯಿ ಬರೆದ ಕೃತಿ ಯಾವುದು?

15. ಅನುಭವ ಮಂಟಪವನ್ನು ಯಾರು ಪ್ರಾರಂಭಿಸಿದರು?

16. ಕೃಷ್ಣದೇವರಾಯನು "ಯವನರಾಜ್ಯ ಪ್ರತಿಷ್ಠಾಪನಾಚಾರ್ಯ" ಎಂಬ ಬಿರುದನ್ನು ಏಕೆ ಧರಿಸಿದನು?

17. ಒಂದನೆಯ ಬಾಜೀರಾವ್ ನಿಗೆ "ಎರಡನೆಯ ಶಿವಾಜಿ" ಎಂಬ ಹೆಸರು ಬರಲು ಕಾರಣವೇನು?

18. ಸಂವಿಧಾನದ ಅರ್ಥ ತಿಳಿಸಿ.

19. ಮಹಾಭಿಯೋಗವನ್ನು ವ್ಯಾಖ್ಯಾನಿಸಿ.

20. ರಾಜ್ಯಪಾಲರನ್ನು ಯಾರು ನೇಮಿಸುತ್ತಾರೆ?

21. ಅವಿಭಕ್ತ ಕುಟುಂಬವನ್ನು ಅರ್ಥೈಸಿ.

22. ಸಾಮಾಜೀಕರಣ ಎಂದರೇನು?

23. ಕರ್ನಾಟಕ ಎಂಬ ಹೆಸರು ಬರಲು ಕಾರಣವೇನು?

24. ಆಗುಂಬೆಯನ್ನು "ದಕ್ಷಿಣದ ಚಿರಾಪುಂಜಿ" ಎನ್ನುತ್ತಾರೆ. ಏಕೆ?

25. ನೀರಾವರಿಯ ಅರ್ಥ ತಿಳಿಸಿ.

26. 'ಪರಿಸರದ ಹೆಜ್ಜೆ ಗುರುತು' ಎಂದರೆ ಏನು?

27. ಮುಂದುವರೆದ ರಾಷ್ಟ್ರಗಳಲ್ಲಿ ಜನಸಂಖ್ಯಾ ಬೆಳವಣಿಗೆ ದರ ಕಡಿಮೆಯಿದೆ ಏಕೆ?

28. ನಿರ್ವಹಣೆಯನ್ನು ವ್ಯಾಖ್ಯಾನಿಸಿ.

III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 16 * 2 = 32

29. ಇಸ್ಲಾಂ ಧರ್ಮದ ಬೋಧನೆಗಳನ್ನು ತಿಳಿಸಿ.

30. ರಜಪೂತರ ರಾಜಮನೆತನಗಳಾವುವು?

31. ಅದ್ವೈತ ಸಿದ್ಧಾಂತ ಮತ್ತು ದ್ವೈತ ಸಿದ್ಧಾಂತಗಳ ನಡುವಿನ ವ್ಯತ್ಯಾಸಗಳೇನು?

32. ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ರಾಜಮನೆತನಗಳಾವುವು?

33. ಷಜಹಾನನು ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿದ ಕೊಡುಗೆಗಳ ತಿಳಿಸಿ.

34. ಸರ್ಕಾರದ ನೀತಿಗಳ ಪರಾಮರ್ಶೆಯಲ್ಲಿ ಪ್ರತಿಪಕ್ಷಗಳ ಪಾತ್ರ ಬಹುಮುಖ್ಯವಾದುದು.ಹೇಗೆ ಸಮರ್ಥಿಸಿ.

35. ರಾಜ್ಯಸಭೆಯ ರಚನೆಯನ್ನು ತಿಳಿಸಿ.

36. ಆಧುನಿಕ ಕೇಂದ್ರ ಕುಟುಂಬಗಳು ದಿನೇ ದಿನೇ ಹೆಚ್ಚಾಗಲು ಕಾರಣಗಳೇನು?

37. ಕುಟುಂಬ ಸದಸ್ಯರ ಜೊತೆ ಮಗು ಕಲಿಯುವ ಮೌಲ್ಯಗಳು ಯಾವುವು?

38. ಭಾರತದಲ್ಲಿ ಕರ್ನಾಟಕದ ಭೌಗೋಳಿಕ ಸ್ಥಾನವನ್ನು ತಿಳಿಸಿರಿ.

39. ಕರ್ನಾಟಕದ ಪ್ರಮುಖ ಪ್ರಾಕೃತಿಕ ವಿಭಾಗಗಳನ್ನು ತಿಳಿಸಿರಿ.

40. ಕರ್ನಾಟಕವನ್ನು ಶ್ರೀಗಂಧದ ನಾಡು ಎಂದು ಏಕೆ ಕರೆಯುತ್ತಾರೆ.?

41. ಕರ್ನಾಟಕದ ನೀರಾವರಿ ವಿಧಗಳಾವುವು?

42. ನವೀಕರಣ ಹೊಂದುವ ಸಂಪನ್ಮೂಗಳನ್ನು ಉದಾಹರಿಸಿರಿ.

43. ಒಂದು ದೇಶದ ಜನಸಾಂದ್ರತೆಯನ್ನು ಹೇಗೆ ಲೆಕ್ಕ ಹಾಕಲಾಗುತ್ತದೆ.?

44. ವೈಯಕ್ತಿಕ ನಿರ್ಧಾರ ಹಾಗೂ ಗುಂಪು ನಿರ್ಧಾರಗಳೆಂದರೇನು?

**IV.** ಆರು–ಎಂಟು ವಾಕ್ಯಗಳಲ್ಲಿ ಉತ್ತರಿಸಿ. **6 * 3 = 18**

45. ಕ್ರೈಸ್ತ ಧರ್ಮದ ಬೋಧನೆಗಳಾವುವು?

46. ಮಹಮ್ಮದ್ ಗವಾನನು ಬಹಮನಿ ರಾಜ್ಯದ ಉತ್ತಮ ಪ್ರಧಾನ ಮಂತ್ರಿ ಎಂದು ಹೇಗೆ ಪರಿಗಣಿಸುವಿರಿ.?

47. ಲೋಕಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳು ಯಾವುವು?

48. ಕರ್ನಾಟಕದಲ್ಲಿ ವ್ಯವಸಾಯದ ಪ್ರಾಮುಖ್ಯತೆ ಕುರಿತು ಬರೆಯಿರಿ.

49. ನಿಮ್ಮ ಮನೆ ಮತ್ತು ಶಾಲೆಗಳಲ್ಲಿ ಇಂಧನ ಉಳಿತಾಯಕ್ಕೆ ನೀವು ಕೈಗೊಳ್ಳುವ ಕ್ರಮಗಳನ್ನು ವಿವರಿಸಿ.

50. "ನಿಯಂತ್ರಣವು ನಿರ್ವಹಣಾ ಕಾರ್ಯದಲ್ಲಿ ಬಹುಮುಖ್ಯವಾದುದು". ವಿಶ್ಲೇಷಿಸಿ.

**V.** ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ. **2 * 4 = 08**

51. ಶಿವಾಜಿಯ ಆಡಳಿತ ಪದ್ಧತಿಯ ಬಗ್ಗೆ ತಿಳಿಸಿ.

52. ನಮ್ಮ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ಪಟ್ಟಿಮಾಡಿ.

**VI.** 53. ಕರ್ನಾಟಕದ ಭೂಪಟವನ್ನು ರಚಿಸಿ ಕೆಳಗಿನವುಗಳನ್ನು ಗುರುತಿಸಿ. **1+3=04**

ಅ) ಬೆಂಗಳೂರು ಬ) ಕರಾವಳಿ ಮೈದಾನ ಕ) ತುಂಗಭದ್ರ ನದಿ

# ಉತ್ತರ ಪತ್ರಿಕೆ

I. 1. ಎ)ಜೆರೂಸಲಂ

2. ಎ)ಕುತುಬ್ ಮಿನಾರ್

3. ಸಿ)ಮಧ್ವಾಚಾರ್ಯರು

4. ಡಿ)ಪಾಣಿಪತ್

5. ಬಿ)ಸಂಸತ್ತು

6. ಸಿ)225

7. ಬಿ)ಮಾತೃ ಪ್ರಧಾನ ಕುಟುಂಬ

8. ಎ)1973

9. ಡಿ)ಹತ್ತಿ

10. ಬಿ)ಭತ್ತ

11. ಬಿ)ಚಿನ್ನ

12. ಎ)ಹೆನ್ರಿ ಫಯೋಲ್

II. 13.ಪೈಗಂಬರರು ಸಾ.ಶ.೬೨೨ ರಲ್ಲಿ ಮೆಕ್ಕಾದಿಂದ ಮದೀನಾಗೆ ಪ್ರಯಾಣ ಬೆಳಸಿದ ಘಟನೆ.

14.ಪೃಥ್ವಿರಾಜ ರಾಸೋ

15.ಬಸವೇಶ್ವರರು

16.ಬಂಧನದಲ್ಲಿದ್ದ ಮಹಮದ್ ಶಾಹನನ್ನು ಬಿಡುಗಡೆಗೊಳಿಸಿ ಬಹಮನಿಯ ರಾಜನನ್ನಾಗಿಸಿದ್ದಕ್ಕಾಗಿ

17.ದಕ್ಷ ಆಡಳಿತ ನಡೆಸಿ,ಮರಾಠ ರಾಜ್ಯದ ಕೀರ್ತಿಯನ್ನು ಪುನ: ಸ್ಥಾಪಿಸುವಲ್ಲಿ ಯಶಸ್ವಿಯಾಗಿದ್ದರಿಂದ

18.ಒಂದು ರಾಷ್ಟ್ರದ ಮೂಲಭೂತ ಕಾನೂನು

19.ಸಂವಿಧಾನವನ್ನು ಉಲ್ಲಂಘಿಸಿದಲ್ಲಿ ರಾಷ್ಟ್ರಪತಿಯವರನ್ನು ಸಂಸತ್ತು ಅಧಿಕಾರದಿಂದ ಕೆಳಗಿಳಿಸುವುದು

20. ರಾಷ್ಟ್ರಪತಿ

21.ಅಜ್ಜ–ಅಜ್ಜಿ,ಅವರ ಮಕ್ಕಳು,ಮೊಮ್ಮಕ್ಕಳು,ಮರಿಮಕ್ಕಳು ಹೀಗೆ ಎರಡು ತಲೆಮಾರಿಗಿಂತ ಹೆಚ್ಚು ಜನರು ವಾಸವಾಗಿರುವುದು

22.ಸಾಮಾಜಿಕ ವರ್ತನೆಗಳ ಕಲಿಕೆ–ಪ್ರಕ್ರಿಯೆಯನ್ನು ಅಂದರೆ ಸಾಮಾಜಿಕ ವ್ಯಕ್ತಿಯಾಗಿ ರೂಪುಗೊಳ್ಳುವ ಕ್ರಿಯೆ

23.ತಮಿಳಿನ 'ಶಿಲಪ್ಪದಿಕಾರಂ' ಪ್ರಾಚೀನ ಕೃತಿಯಲ್ಲಿ "ಕರುನಾಟ್" ಎಂಬ ಶಬ್ಧದಿಂದ ಕರ್ನಾಟಕ ಎಂದು ಕರೆದಿರುವುದು ತಿಳಿದು ಬರುತ್ತದೆ.

24.ಆಗುಂಬೆಯೂ ರಾಜ್ಯದಲ್ಲಿ ಅಧಿಕ ಮಳೆ ಬೀಳುವ ಪ್ರದೇಶವಾಗಿರುವುದರಿಂದ

25.ಕೃಷಿಗಾಗಿ ಕೃತಕವಾಗಿ ನೀರು ಪೂರೈಸುವುದೇ ನೀರಾವರಿ.

26.ಸದ್ಯದ ತಾಂತ್ರಿಕತೆಯನ್ನು ಬಳಸುತ್ತಾ ಒಬ್ಬ ವ್ಯಕ್ತಿ ಪೃಥ್ವಿಯ ಎಷ್ಟು ಭೌತಿಕ ಪ್ರದೇಶವನ್ನು ಬಳಸಿ ಜೀವಿಸುತ್ತಿದ್ದಾನೆ ಎಂಬುದನ್ನು ಸೂಚಿಸುವ ಸಾಧನ

27.ದೇಶದ ಎಲ್ಲಾ ಜನರು ವಿದ್ಯಾವಂತರು ಮತ್ತು ತಿಳುವಳಿಕೆವುಳ್ಳರಾಗಿದ್ದು ಆರೋಗ್ಯ ಮತ್ತು ಸ್ವಚ್ಛತೆಯ ಸೌಲಭ್ಯಗಳು ದೊರೆಯುತ್ತಿರುವುದರಿಂದ

28.ಯೋಜನೆ,ಸಂಘಟನೆ,ಸಿಬ್ಬಂದಿ ಪೂರೈಕೆ,ನಿರ್ದೇಶನ,ಸಂಯೋಜನೆ ಮತ್ತು ನಿಯಂತ್ರಣದಂತಹ ಪ್ರಮುಖ ಕಾರ್ಯಗಳ ಒಟ್ಟು ಮೊತ್ತ.

III. 29. ೧.ದೇವರು ಒಬ್ಬನೇ. ಆತನೇ ಅಲ್ಲಾ.ಅಲ್ಲಾನನ್ನು ಒಲಿಸಿಕೊಳ್ಳಲು ಸರಳ ಪ್ರಾರ್ಥನೆಯೊಂದು ಸಾಕು.

೨.ಪ್ರಾಮಾಣಿಕತೆ ಮತ್ತು ನೀತಿಯುತ ಜೀವನ ನಡೆಸಬೇಕು,ದಶ್ಚಟಗಳಿಂದ ದೂರವಿರಬೇಕು.

೩.ದೀನ ದುರ್ಬಲರ ಬಗ್ಗೆ ಕರುಣೆ ಹಾಗು ಸ್ತ್ರೀಯರ ಬಗ್ಗೆ ಗೌರವವಿರಬೇಕು.

30.ಗುರ್ಜರ ಪ್ರತಿಹಾರರು,ಚಂದೇಲರು,ಗಹಡ್ವಾಲರು,ಸೋಳಂಕಿಯರು,ಪಾರಮಾರರು ಮತ್ತು ಚೌವ್ಹಾಣರು

31.ಅದ್ವೈತ ಸಿದ್ಧಾಂತ – *ಏಕ ಅಥವಾ ಒಂದೇ ಎಂದರ್ಥ

*ಜೀವಾತ್ಮ ಮತ್ತು ಪರಮಾತ್ಮ ಬೇರೆ ಬೇರೆಯಲ್ಲ. ಎರಡೂ ಒಂದೇ.

*ಬ್ರಹ್ಮನೊಬ್ಬನೆ ಸತ್ಯ ಉಳಿದ ಜಗತ್ತು ಮಿಥ್ಯ.

ದ್ವೈತ ಸಿದ್ಧಾಂತ – *ಎರಡು ಎಂದರ್ಥ

*ಜೀವಾತ್ಮ ಮತ್ತು ಪರಮಾತ್ಮ ಬೇರೆ ಬೇರೆ.

*ಜಗತ್ತು ಮಾಯೆಯಲ್ಲ, ಪರಮಾತ್ಮನಷ್ಟೇ ಸತ್ಯ.

32. *ಸಂಗಮ *ಸಾಳುವ *ತುಳುವ *ಅರವೀಡು

**33.***ಕೆಂಪುಕೋಟೆ *ತಾಜ್ ಮಹಲ್ *ಮೋತಿ ಮಸೀದಿ *ಜಾಮಿಯಾ ಮಸೀದಿ *ದಿವಾನ್–ಇ–ಆಮ್ *ದಿವಾನ್–ಇ–ಖಾಸ್ *ಮಯೂರ ಸಿಂಹಾಸನ ಇತ್ಯಾದಿ**

**34.*ಸರ್ಕಾರದ ತಪ್ಪುಗಳ ಎತ್ತಿ ತೋರಿಸುವುದು *ಸರ್ಕಾರ ಮತ್ತು ಅಧಿಕಾರಿಗಳ ಎಚ್ಚರಿಸುವುದು *ಸರಿಯಾದ ರೀತಿ ಕಾರ್ಯ ನಿರ್ವಹಿಸುವಂತೆ ಮಾಡುವುದು**

**35.*250** ಸದಸ್ಯರ ಒಳಗೊಂಡಿದೆ ***238** ಸದಸ್ಯರು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಯ ಸದಸ್ಯರಿಂದ ಆಯ್ಕೆ ***12** ಸದಸ್ಯರು ಸಾಹಿತ್ಯ,ಕಲೆ,ವಿಜ್ಞಾನ ಮತ್ತು ಸಮಾಜ ಸೇವೆಯಲ್ಲಿ ವಿಶೇಷ ಅನುಭವ ಪಡೆದವರನ್ನು ತಾಷ್ಟ್ರಪತಿಗಳು ನಾಮಕರಣ ಮಾಡುತ್ತಾರೆ

**36.ವೈಯಕ್ತಿಕತೆ,ವೈಯಕ್ತಿಕ ಸಂತೋಷ,ಸುಖ,ಆಸ್ತಿಯ ಹಕ್ಕು,ಬದಲಾದ ಸಾಮಾಜಿಕ ಮೌಲ್ಯಗಳು,ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಆದ ಪ್ರಗತಿ,ನಗರೀಕರಣ,ಪ್ರಜಾಸತಾತ್ಮಕ ಹಾಗೂ ಸಮಾನತೆಯ ತತ್ವಗಳು**

**37.ಪ್ರೀತಿ,ವಾತ್ಸಲ್ಯ,ವಿಶ್ವಾಸ,ಸಹನೆ,ಸಹೃದಯತೆ,ಸಹಕಾರ**

**38.*11-31’ ಮತ್ತು 18-45’ ಉತ್ತರ ಅಕ್ಷಾಂಶಗಳು ಹಾಗೂ 74-12’ ಮತ್ತು 78-40’ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. *ಉತ್ತರದ ತುದಿ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಿಂದ ದಕ್ಷಿಣದ ತುದಿ ಚಾಮರಾಜನಗರ ಜಿಲ್ಲೆಯವರೆಗೆ ಒಟ್ಟು ೭೫೦ ಕಿ.ಮೀ ಉದ್ದ *ಪಶ್ಚಿಮದಿಂದ ಪೂರ್ವಕ್ಕೆ ೪೦೦ ಕಿ.ಮೀ ವರಗೆ ಅಗಲ ಕಾರವಾರದಿಂದ ಕೋಲಾರದ ಮುಳುಬಾಗಿಲು .**

**39.*ಕರಾವಳಿ ಮೈದಾನ *ಮಲೆನಾಡು *ಮೈದಾನ ಪ್ರದೇಶ**

**40.*ಶ್ರೀಗಂಧದ ಮರಗಳು ಹೆಚ್ಚು ಬೆಳೆಯುತ್ತವೆ *ಇದರಿಂದ ಸುಗಂಧ ದ್ರವ್ಯ,ಕುಸುರಿ ಕೆಲಸದ ಕುಶಲ ವಸ್ತುಗಳು,ಸಾಬೂನು,ಔಷಧಿಗಳನ್ನು ತಯಾರಿಸುತ್ತಾರೆ *ವಿಶ್ವವಿಖ್ಯಾತವಾಗಿದ್ದು ದೇಶೀಯ ಅಪಾರವಾದ ಬೇಡಿಕೆ ಪೂರೈಸಿ ವೀದೇಶಗಳಿಗೂ ರಫ್ತು ಮಾಡುವುದರಿಂದ**

**41.** ಬಾವಿ ನೀರಾವರಿ,ಕೆರೆ ನೀರಾವರಿ,ಕಾಲುವೆ ನೀರಾವರಿ

**42.ನೀರು ಭೂಮಿ ಅರಣ್ಯ ಗಾಳಿ ಸೂರ್ಯನ ಶಾಖ ಮೀನುಗಳು ಇತ್ಯಾದಿ**

**43.ಒಂದು ದೇಶದಲ್ಲಿರುವ ಒಟ್ಟು ಜನಸಂಖ್ಯೆಯನ್ನು ಅಲ್ಲಿನ ಒಟ್ಟು ಭೂವಿಸ್ತೀರ್ಣದಿಂದ ಭಾಗಿಸುವ ಮೂಲಕ ಜನ ಸಾಂದ್ರತೆಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.**

**44.ಒಬ್ಬ ವ್ಯಕ್ತಿ ನಿರ್ಧಾರ ಕೈಗೊಳ್ಳುವುದನ್ನು ವೈಯಕ್ತಿಕ ನಿರ್ಧಾರ ಎನ್ನುವರು**

**ಒಂದು ತಂಡ ತಗೆದುಕೊಳ್ಳುವ ನಿರ್ಧಾರಗಳನ್ನು ಗುಂಪು ನಿರ್ಧಾರಗಳೆನ್ನುವರು**

**IV. 45.** ೧)ದೇವರು ಒಬ್ಬನೇ,ದಯಾಮಯನಾದ ದೇವರು ಸರ್ವ ಜೀವರಾಶಿಗಳ ತಂದೆ.

೨)ಪ್ರತಿಯೊಬ್ಬರಲ್ಲಿ ಸಹೋದರತ್ವ ಭಾವನೆಯಿರಬೇಕು

೩)ನಾವು ಕಷ್ಟದಲ್ಲಿರುವವರನ್ನು ಪ್ರೀತಿಸಿದರೆ ದೇವರನ್ನು ಪ್ರೀತಿಸಿದಂತೆ

೪)ಪರರಿಂದ ಯಾವುದನ್ನೂ ಬಯಸದೇ ನಾವು ಅವರ ಸೇವೆಯನ್ನು ಮಾಡಬೇಕು

೫)ಮಾನವನ ಸೇವೆಯೂ ದೇವರ ಸೇವೆಗೆ ಸಮನಾದುದು

೬)ಮಾನವನು ತನ್ನ ತಪ್ಪಿಗೆ ಪಶ್ಚಾತ್ತಾಪಪಟ್ಟರೆ ಅದಕ್ಕೆ ದೇವರಿಂದ ಕ್ಷಮಾಪಣೆ ಇದೆ

೭)ನಿನ್ನ ಶತ್ರುವನ್ನು ನೀನು ಪ್ರೀತಿಸು ನಿನಗೆ ಕೆಟ್ಟದ್ದನ್ನು ಬಯಸುವವರಿಗೆ ನೀನು ಒಳ್ಳೆಯದನ್ನು ಬಯಸು

**46.***ದಿಗ್ವಿಜಯಗಳು ಮತ್ತು ಅಚ್ಚುಕಟ್ಟಾದ ಆಡಳಿತ ಕ್ರಮದಿಂದ ಬಹಮನಿ ರಾಜ್ಯದ ಕೀರ್ತಿ ಹೆಚ್ಚಿಸಿದನು

*ಕೊಂಕಣ,ಗೋವಾ ಮತ್ತು ಬೆಳಗಾವಿಗಳ ವಶ *ಒರಿಸ್ಸಾದ ಮೇಲೆ ದಾಳಿ ಕೊಂಡವೀಡು ವಶ

*ಸಾ.ಶ **1481**ರಲ್ಲಿ ಕಂಚಿಯ ದಾಳಿ ಮಾಡಿ ಅಪಾರ ಸಂಪತ್ತು ವಶ *ಬಹಮನಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಾರಣನಾದನು

**47.** *ಭಾರತದ ಪ್ರಜೆಯಾಗಿರಬೇಕು *ಕನಿಷ್ಠ **25** ವರ್ಷ ವಯೋಮಿತಿ ಹೊಂದಿರಬೇಕು *ಸರ್ಕಾರದ ಯಾವುದೇ ಹುದ್ದೆಯಲ್ಲಿರಬಾರದು *ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿರಬಾರದು *ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾಗಿರಬಾರದು *ಸಂಸತ್ತು ಕಾಲಕಾಲಕ್ಕೆ ನಿಗದಿಪಡಿಸಿರುವ ಅರ್ಹತೆ ಪಡೆದಿರಬೇಕು

೪೮. *ಜೀವನಾಧಾರ ವೃತ್ತಿ *ನಮ್ಮ ರಾಜ್ಯದ ಆರ್ಥಿಕತೆಯ ಬೆನ್ನೆಲುಬು *ಆರ್ಥಿಕಾಭಿವೃದ್ಧಿ *ಉದ್ಯೋಗ ನೀಡಿದೆ *ಜನರಿಗೆ ಆಹಾರ ಮತ್ತು ಕೈಗಾರಿಕೆಗಳಿಗೆ ವಸ್ತು *ರಾಜ್ಯದ ಆದಾಯದ ಮೂಲ *ವಿದೇಶಿ ವಿನಿಮಯ ಗಳಿಕೆ *ತೃತೀಯ ವೃತ್ತಿಗಳಾದ ಸಾರಿಗೆ,ಬ್ಯಾಂಕಿಂಗ್ ವ್ಯವಸ್ಥೆ,ವಿಮೆ ಇತ್ಯಾದಿಗಳ ಪ್ರಗತಿ

**49.** *ಬಳಕೆ ಮುಗಿದ ಮೇಲೆ ಎಲ್ಲ ವಿದ್ಯುದ್ದೀಪಗಳನ್ನು ಆರಿಸಿರಿ *ರಾತ್ರಿ ಹೊತ್ತಿನಲ್ಲಿ ಏರ್ ಕಂಡೀಷನ್ ಮತ್ತು ಹೀಟರ್ ಗಳನ್ನು ಆರಿಸಿರಿ *ಮನೆಯಿಂದಾಚೆಗೆ ಬನ್ನಿ,ನೀವು ಉಲ್ಲಾಸಭರಿತರಾಗಿರುತ್ತೀರಲ್ಲದೇ,ಕಡಿಮೆ ಇಂಧನ ಬಳಸುತ್ತೀರಿ *ಮನೆ/ಕಾರನ್ನು ತಂಪಾಗಿಸುವಾಗ ಅಥವಾ ಬಿಸಿಯಾಗಿಸುವಾಗ,ಬಾಗಿಲು–ಕಿಟಕಿಗಳನ್ನು ಮುಚ್ಚಿರಿ

**50.***ಸಂಸ್ಥೆಯಲ್ಲಿ ಶಿಸ್ತಿನ ಒಂದು ವಾತವರಣವನ್ನು ಕಲ್ಪಿಸಿ,ಚಟುವಟಿಕೆಗಳನ್ನು ಸಮರ್ಪಕವಾಗಿ ಹೊಂದಾಣಿಕೆಯಿಂದ ನಡೆಯುವಂತೆ ನೋಡಿಕೊಳ್ಳುವುದು *ಪೂರ್ವಭಾವಿ ಯೋಜನೆಗಳಿಗನುಸಾರವಾಗಿ ಮತ್ತು ನಿರಂತರವಾಗಿ ಚಟುವಟಿಕೆಗಳು ಮುಂದುವರೆಯುವಂತೆ ಮಾಡುವುದು *ಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸುವುದು

**V.** **51.***ಉತ್ತಮ ಆಡಳಿತ ಸಂಘಟನೆ *ರಾಜ್ಯವನ್ನು ಅನೇಕ ಪ್ರಾಂತ್ಯಗಳಾಗಿ ವಿಂಗಡನೆ *ಮರಾಠಿ ಆಡಳಿತ ಭಾಷೆ *ಆಡಳಿತದಲ್ಲಿ ನೆರವು ನೀಡಲು ಅಷ್ಟ ಪ್ರಧಾನರೆಂಬ ಮಂತ್ರಿಗಳಿದ್ದರು *ಇತರೆ ಅಧಿಕಾರಿಗಳು ಕೂಡ ಇದ್ದರು *ಪ್ರಾಂತ,ಜಿಲ್ಲೆ,ಗ್ರಾಮ ಆಡಳಿತದ ಘಟಕಗಳಾಗಿದ್ದವು

**52**. ***ಲಿಖಿತ ಮತ್ತು ಬೃಹತ್ ಸಂವಿಧಾನ  *ಭಾಗಶ: ನಮ್ಯ ಮತ್ತು ಭಾಗಶ: ಅನಮ್ಯ ಸಂವಿಧಾನ  *ಸಂಸದೀಯ ಸರ್ಕಾರ ಪದ್ಧತಿ  *ಗಣತಂತ್ರ ವ್ಯವಸ್ಥೆ  *ಸಂಯುಕ್ತ ಪದ್ಧತಿ  *ಮೂಲಭೂತ ಹಕ್ಕುಗಳು  *ಮೂಲಭೂತ ಕರ್ತವ್ಯಗಳು  *ರಾಜ್ಯ ನಿರ್ದೇಶಕ ತತ್ವಗಳು  *ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ  *ಏಕ ಪೌರತ್ವ  *ವಯಸ್ಕ ಮತದಾನ ಪದ್ಧತಿ  *ದ್ವಿಸದನ ಶಾಸಕಾಂಗ  *ಪಕ್ಷ ಪದ್ಧತಿ**

**VI.** **53.** **ಅ) ಬೆಂಗಳೂರು  ಬ) ಕರಾವಳಿ ಮೈದಾನ  ಕ) ತುಂಗಭದ್ರ ನದಿ**

